ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**C.C.No.795/2026.**

ದಿನಾಂಕಃ**17.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಜಯಮ್ಮ | ಚಾಸಾ-3, ಪ್ರಾಸ-7 |
| ಗಂಡನ ಹೆಸರು | ಮಾದವ | |
| ವಯಸ್ಸು (ವರ್ಷಗಳಲ್ಲಿ) | 59 | |
| ಉದ್ಯೋಗ | ಟೈಲರಿಂಗ್ | |
| ವಾಸ | ಕೋಟೆ, ಕಡೂರು ಟೌನ್ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 1, 2 ಗೊತ್ತು. ಈಗ ನೋಡುತ್ತಿರುವ ದಾಖಲೆಗಳಲ್ಲಿನ ಸಹಿ ನನ್ನದು, ಸದರಿ ದಾಖಲೆಯು ನಿಪಿ 2 ಮಹಜರ್, ನಿಪಿ 15 ಸ್ಥಳ ನಕಾಶೆ ಹಾಗೂ ನೋಟೀಸ್ ಆಗಿದ್ದು ನಿಪಿ 2, 15 ರ ಸಹಿಯನ್ನು ನಿಪಿ 2ಸಿ, 15ಬಿ ಎಂದು ಗುರುತಿಸಲಾಯಿತು ಹಾಗೂ ನೋಟೀಸನ್ನು ನಿಪಿ 24 ಸಾಕ್ಷಿಯ ಸಹಿ ನಿಪಿ24ಎ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಪೊಲೀಸರು ಮಹಜರಿಗೆ ಕಳ್ಳತನವಾದ ಸ್ಥಳಕ್ಕೆ ಬಂದಿದ್ದಾಗ ಬೆಳಗ್ಗೆ 11.30 ರಿಂದ 1 ಗಂಟೆಯಲ್ಲಿ ಚಾಸಾ 1, 2 ಮತ್ತು ನನ್ನ ಸಮಕ್ಷಮ ಮಹಜರ್ ಮಾಡಿ ನಿಪಿ 3 ರಿಂದ 7 ರಂತೆ ಪೋಟೋ ತೆಗೆದಿರುತ್ತಾರೆ ಹಾಗೂ ಸಹಿ ಪಡೆದಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

ಪಾಟೀಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ22.02.2026 ರಂದು ಮಹಜರಿಗೆ ಪಂಚರಾಗುವಂತೆ ನನಗೆ, ಚಾಸಾ 2 ರವರಿಗೆ ನಿಪಿ 24 ರಂತೆ ನೋಟೀಸು ನೀಡಿದರು ಎಂದರೆ ಸರಿ. ಅದೇ ದಿನ ನಿಪಿ 20 ರಂತೆ ಮಹಜರ್ ಮಾಡಿ ನಿಪಿ 15 ರಂತೆ ನಕ್ಷೆ ತಯಾರು ಮಾಡಿದರು ಎಂದರೆ ಸರಿ.

ಪಾಟೀಸವಾಲುಃ ಆರೋಪಿ ಪರ ಹೆಚ್ ಎನ್ ಎಸ್ ವಕೀಲರಿಂದ ಃ

ನನಗೆ ನೋಟೀಸು ನೀಡಿದಾಗ ಬೆಳಗ್ಗೆ 11.30 ಆಗಿತ್ತು. ಮಹಜರಿಗೆ

ಹಾಜರಾಗುವಂತೆ ನೋಟೀಸು ನೀಡಿದ್ದರು. ಮಹಜರ್ ಅನ್ನು 11.30 ರಿಂದ 1.30 ರ ವರೆಗೂ ಮಾಡಿರುತ್ತಾರೆ. ನಿಪಿ 2 ರಲ್ಲಿನ ಸಹಿಯನ್ನು ಕಳ್ಳತನವಾದ ಮನೆಯಲ್ಲಿ ಹಾಕಿರುತ್ತೇನೆ, ನನ್ನನ್ನು ಹೊರತು ಚಾಸಾ 1, 2 ಸಹಃ ಸಹಿ ಮಾಡಿರುತ್ತಾರೆ. ನಿಪಿ 2 ರಲ್ಲಿ ಏನು ಬರೆದಿದೆ ಎಂದು ಹೇಳಲು ಸಾದ್ಯವಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲವೆನ್ನುತ್ತಾರೆ. ಯಾವ ಕಳ್ಳತನದ ಮಾಲುಗೆಂದು ನಮೂದಿಸಲಾಗಿದೆ ಎಂದು ಹೇಳಲು ಸಾದ್ಯವಿಲ್ಲ. ಪೋಟೋದಲ್ಲಿ ಕಾಣುವಂತೆ ಯಾವುದೇ ಬೀರು ಬಾಗಿಲು ಒಡೆದಿರಲಿಲ್ಲ ಎಂದರೆ ಸಾಕ್ಷಿಯು ಒಂದು ಒಡೆದಿತ್ತು ಎನ್ನುತ್ತಾರೆ. ಚಾಸಾ 1 ರವರ ತಾಯಿ ನನ್ನ ಆತ್ಮೀಯರು ಎಂದರೆ ಒಂದೇ ಬೀದಿಯ ವಾಸಿಗಳು ಎನ್ನುತ್ತಾರೆ. ಸದರಿಯವರ ಮನೆಯಲ್ಲಿ ಯಾವುದೇ ಕಳ್ಳತನವಾಗಿರದಿದ್ದರು ಅವರು ನನ್ನ ಆತ್ಮೀಯರಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿವಾದಿ ಮನೆಯು ನೇತ್ರಾವತಿ ಬಿನ್ ನಾಗಯ್ಯ ರವರ ಮನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸು.40 ವರ್ಷದಿಂದ ಚಾಸಾ 1 ರವರ ತಾಯಿ ವಾಸವಿದ್ದಾರೆ ಎನ್ನುತ್ತಾರೆ. ಸದರಿ ಮನೆ ಚಾಸಾ 1 ರವರ ತಾಯಿಯ ಮನೆಯಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ನ್ನು ಸು.12 ಗಂಟೆಯಲ್ಲಿ ಬರೆದಿರುತ್ತಾರೆ. ಪೊಲೀಸರು ಬರೆದುಕೊಂಡಿದಲ್ಲ ಆದರೆ ಟೈಪ್ ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಚಾಸಾ 1 ರವರ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.